**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 386/2023**

ಡಿಡಬ್ಲ್ಯೂ: 01

ಹೆಸರು : ಮಂಜುನಾಥ ಬಸಪ್ಪ ಹೆಬಸೂರ
ವಯಸ್ಸು : 54 ವರ್ಷ
ಉದ್ಯೋಗ : ವ್ಯಾಪಾರ
ವಾಸಸ್ಥಳ : ಬ್ಯಾಡಗಿ

ದಿನಾಂಕ : 07.11.2024 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಿಂದಃ**

ದೂರುದಾರರು ನನಗೆ 10 ಲಕ್ಷ ರೂಪಾಯಿಗಳನ್ನು ಆರ ಟಿ ಜಿ ಎಸ ಮುಖಾಂತರ ನೀಡಿದ್ದರು. ನಂತರ ನಾನು ದೂರುದಾರರಿಗೆ 5 ಲಕ್ಷದಂತೆ ಎರಡಬಾರಿ ಆರ ಟಿ ಜಿ ಎಸ ಮುಖಾಂತರ ನೀಡಿರುತ್ತೇನೆ. ನಂತರ ಮತ್ತೇ ದೂರುದಾರ 5 ಲಕ್ಷ ಹಣ ಕೇಳಿದಾಗ ನಂತರ ಹೆಚ್ಚಿಗೆ 5 ಲಕ್ಷ ಆರ ಟಿ ಜಿ ಎಸ ಮುಖಾಂತರ ನೀಡಿರುತ್ತೇನೆ. ನಂತರ 2 ಲಕ್ಷ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ನಾನು ಹೆಚ್ಚಿಗೆ ನೀಡಿದ 7 ಲಕ್ಷ ಹಣವನ್ನು ದೂರುದಾರನಿಂದ ಮರಳಿ ಕೇಳಿದಾಗ ಇಂದು, ನಾಳೆ ಅಂತಾ ಹೇಳುತ್ತಿದ್ದರು. ನಂತರ ಒಮ್ಮಿಗೆ ದೂರುದಾರರು ವಕೀಲರ ಮೂಲಕ ನನಗೆ ಒಂದು ನೋಟಿಸ ನೀಡಿರುತ್ತಾರೆ. ನಂತರ ದೂರುದಾರನನ್ನು ವಿಚಾರಿಸಿದಾಗ ನಾನೇ ದೂರುದಾರನಿಗೆ 10 ಲಕ್ಷ ಕೊಡಬೇಕು ಅಂತಾ ಹೇಳಿರುತ್ತಾನೆ. ನಂತರ ದೂರುದಾರನು ಕೋರ್ಟನಲ್ಲಿ ನೋಡುತ್ತೇನೆ ಅಂತಾ ಹೇಳಿ ಹೋಗಿರುತ್ತಾನೆ. ದೂರುದಾರನಿಗೂ ಮತ್ತು ನನಗೂ ಸುಮಾರು 15-16 ವರ್ಷದಿಂದ ಪರಿಚಯ ಇರುತ್ತದೆ. ದೂರುದಾರನಿಗೂ ಮತ್ತು ನನಗೂ

ಚೆಕ್ಕುಗಳನ್ನು ಕೊಡುವುದು ತೆಗೆದುಕೊಳ್ಳುವುದು ವ್ಯವಹಾರ ಮೊದಲಿನಿಂದಲೂ ಇತ್ತು. ಜೂನ 2020 ರಂದು ದೂರುದಾರನಿಗೆ ಚೆಕ್ಕನ್ನು ಕೊಟ್ಟಿರುತ್ತೇನೆ. ನಂತರ ನನಗೆ ದೂರುದಾರನ ಕಡೆ ಚೆಕ್ಕು ಇರುವುದರಿಂದ ನನ್ನ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾನೆ ಅಂತಾ ಗೊತ್ತಾಯಿತು. ನಂತರ ನಾನು ಬ್ಯಾಂಕಿಗೆ ಹೋಗಿ ಖಾತಾವಿವರವನ್ನು ಪಡೆದಿರುತ್ತೇನೆ. ಸದರಿ ಖಾತಾ ವಿವರದಲ್ಲಿ ಆರೋಪಿತನಿಗೆ ದಿನಾಂಕಃ 13.10.2020 ರಂದು 5 ಲಕ್ಷ ರೂಗಳನ್ನು ಮತ್ತು 17.10.2020 ರಂದು 5 ಲಕ್ಷ ರೂಪಾಯಿಗಳನ್ನು ಮತ್ತು 21.11.2020 ರಂದು 5 ಲಕ್ಷ ಗಳನ್ನು ಆರ ಟಿ ಜಿ ಎಸ ಮುಖಾಂತರ ದೂರುದಾರನಿಗೆ ಹಣವರ್ಗಾವಣೆ ಮಾಡಿರುತ್ತೇನೆ. ಬ್ಯಾಂಕ ಖಾತಾವಿವರವನ್ನು ನಿಡಿ-01 ಎಂದು ಗುರುತಿಸಲಾಯಿತು. ನನಗೆ ಹೆಚ್ಚಿಗೆ ಹಣ ದೂರುದಾರನು ಕೊಡುವುದು ಬಾಕಿ ಇರುವುದರಿಂದ ಆತನ ಮೇಲೆ ದೂರನ್ನು ಸಲ್ಲಿಸುವವನಿದ್ದೇನೆ. ಆದ್ದರಿಂದ ನನ್ನನ್ನು ಬಿಡುಗಡೆಗೊಳಿಸಲು ಕೇಳಿಕೊಳ್ಳುತ್ತಿದ್ದೇನೆ.

**ಪಾಟೀ ಸವಾಲು : ದೂರುದಾರರ ಪರ ವಕೀಲರಿಂದ :**

ದೂರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸ ಅದೆ.

ಜೆಎಂಎಫ್‌ಸಿ, ಬ್ಯಾಡಗಿ.